

ಹನಿಪಾರ್ಕ್‌ನಲ್ಲಿ
ಗಮನಸೆಳೆಯಲಿರುವ ಪರಿಕರಗಳು

# ಭಾಗಮಂಡಲದಲ್ಲಿ ಹನಿಪಾರ್ಕ್

**ತರಬೇತಿ ಕೇಂದ್ರ ಆರಂಭವಾದಲ್ಲಿಂದ ಇದುವರೆಗೆ 3950 ಮಂದಿ ಜೇನುಕೃಷಿ ತರಬೇತಿಯಲ್ಲಿ ಮೂರು ತಿಂಗಳ ಅವಧಿಯ ಸರ್ಟಿಫಿಕೇಟ್ ಕೋರ್ಸ್ ಪೂರೈಸಿದ್ದಾರೆ. ಇದಲ್ಲದೇ  ಒಂದು ವಾರದ, ಒಂದು ತಿಂಗಳ ತರಬೇತಿಯನ್ನು ರಾಜ್ಯದ ಹಲವರು ಹೊಂದಿದ್ದಾರೆ.**

★ ಚಿತ್ರ- ಲೇಖನ: ಸಿ.ಎಸ್.ಸುರೇಶ್

ಕೊಡಗಿನ ಪುಣ್ಯಕ್ಷೇತ್ರ ಭಾಗಮಂಡಲ ಬರಿ ಪ್ರವಾಸಿತಾಣವಾಗಿ ಮಾತ್ರವಲ್ಲ, ಜೇನು ಕೃಷಿಯ ಸಂಶೋಧನೆಯಲ್ಲೂ ಖ್ಯಾತಿ ಹೊಂದಿದೆ. ರಾಜ್ಯದ ಏಕೈಕ ಜೇನು ಕೃಷಿ ತರಬೇತಿ ಕೇಂದ್ರ ಭಾಗಮಂಡಲದಲ್ಲಿ ಇದ್ದು ಈ ಕೇಂದ್ರ್ರದ ಮೂಲಕ ಸಾವಿರಾರು ಕೃಷಿಕರು, ಯುವಜನರು ತರಬೇತಿ ಹೊಂದಿದ್ದಾರೆ. ಇದೀಗ ಜೇನು ತರಬೇತಿ ಕೇಂದ್ರ್ರದಲ್ಲಿ ಸುಸಜ್ಜಿತ ಹನಿಪಾರ್ಕ್ ರೂಪುಗೊಳ್ಳಲ್ಲಿದ್ದು  ಅದರಲ್ಲಿ ಜೇನು ನೊಣಗಳ ಸಂಶೋಧನೆ, ನೊಣಗಳ ಬೆಳವಣಿಗೆಯ ಹಂತಗಳನ್ನು ತೋರಿಸುವ ಸ್ಲೈಡ್‌ಗಳು, ಚಾರ್ಟ್‌ಗಳು ಪ್ರದರ್ಶನಗೊಳ್ಳಲಿವೆ. ಸುಮಾರು 50 ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟಡದ ಕಾಮಗಾರಿ ಕಾರ್ಯ ಆರಂಭಗೊಂಡಿದೆ.

ರಾಜ್ಯದ ಏಕೈಕ ಜೇನು ಕೃಷಿ ತರಬೇತಿ ಕೇಂದ್ರ ಎಂಬ ಖ್ಯಾತಿಯ ಈ ಕೇಂದ್ರವು 1953 ರಲ್ಲಿ ಆರಂಭಗೊಂಡಿದ್ದು ಆರಂಭದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಅಧೀನದಲ್ಲಿತ್ತು. ಬಳಿಕ 2011ರ ಏಪ್ರಿಲ್‌ನಲ್ಲಿ ಕೃಷಿ

ಜೇನು ಉತ್ಪಾದನೆಗಾಗಿ ಸಾಲಾಗಿ ಇರಿಸಿದ ಪೆಟ್ಟಿಗೆಗಳು

